## ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಸಿಡಿ/2350/2021/ಪಿ.ಓ.ಎ.ಆರ್.ಇ-05
ಮಂಡನಾಧಿಕಾರಿಯವರ ಶಾಖೆ.

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು ದಿನಾಂಕ: 21/02/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: 1) ಶ್ರೀ.ಬಸವರಾಜು ಬಿ.ಜಿ. ಬಿನ್ ಶ್ರೀ. ಹೆಚ್.ಜಿ. ರುದ್ರಪ್ಪ, ಭೂಮಾಪಕರು (ನಿಯೋಜನೆ ಸೇವೆ), ವಿಶೇಷ ಭೂಸ್ವಾಧೀನ ಶಾಖೆ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು,**

**2) ಶ್ರೀ. ಎಸ್. ಶಿವಸ್ವಾಮಿ ಬಿನ್ ಶಿವಮಾದೇಗೌಡ, ಎಸ್.ಡಿ.ಎ. (ನಿಯೋಜನೆ ಸೇವೆ), ವಿಶೇಷ ಭೂಸ್ವಾಧೀನ ಶಾಖೆ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು,**

ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.

******

1. ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ಜಿಲ್ಲೆ (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, **1) ಶ್ರೀ. ಬಸವರಾಜು ಬಿ.ಜಿ. ಬಿನ್ ಶ್ರೀ. ಹೆಚ್.ಜಿ. ರುದ್ರಪ್ಪ, ಭೂಮಾಪಕರು (ನಿಯೋಜನೆ ಸೇವೆ), ವಿಶೇಷ ಭೂಸ್ವಾಧೀನ ಶಾಖೆ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು, 2) ಶ್ರೀ. ಎಸ್. ಶಿವಸ್ವಾಮಿ ಬಿನ್ ಶಿವಮಾದೇಗೌಡ, ಎಸ್.ಡಿ.ಎ. (ನಿಯೋಜನೆ ಸೇವೆ), ವಿಶೇಷ ಭೂಸ್ವಾಧೀನ ಶಾಖೆ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು,** (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ **ಶ್ರೀ. ಪ್ರದೀಪ್ ಹೆಚ್. ಆರ್. ಬಿನ್ ರಮೇಶ್ ಸಿ. ಎಲಕ್ಟ್ರೀಷಿಯನ್, ಹುಳಿಮಾವು, ಬನ್ನೇರುಘಟ್ಟರಸ್ತೆ, ಬೆಂಗಳೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರ ಮಾವನವರಾದ ಶ್ರೀ. ಮಾದಪ್ಪ ಬಿನ್ ನಂಜಪ್ಪ ಇವರ ಮಾಲೀಕತ್ವದಲ್ಲಿರುವ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸಣ್ಣನಾಯಕನಪುರ ಗ್ರಾಮದ ಸರ್ವೆ

ಕಂ/ಉಪಲೋಕ್/ಬಿಸಿಡಿ/2350/2021
ಪಿ.ಓ.ಎ.ಆರ್.ಇ-5

ನಂ.46 ರಲ್ಲಿ 5 ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಲು ಜಿಲ್ಲಾಧಿಕಾರಿ, ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಭೂ ಪರಿವರ್ತನೆಗೆ ಸಂಬಂಧಿಸಿದಂತೆ ಎನ್.ಓ.ಸಿ. ನೀಡಲು ವಿಶೇಷ ಜಿಲ್ಲಾಧಿಕಾರಿ, ಕೆ.ಹೆಚ್.ಬಿ. ಕಾವೇರಿ ಭವನ, ಬೆಂಗಳೂರು ಇವರಿಗೆ ಪತ್ರ ಕಳುಹಿಸಿದ್ದು, ಸದರಿ ಕಚೇರಿಯಲ್ಲಿ ಕೆಲಸ ಮಾಡುವ 1 ಮತ್ತು 2ನೇ ಎದುರುದಾರರು ಎನ್.ಓ.ಸಿ. ನೀಡಲು 25,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ಬೆಂಗಳೂರು ನಗರ ಜಿಲ್ಲೆ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 23/2017 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13(1)(d), 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ 1ನೇ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 25,000/- ರೂ. ಲಂಚವನ್ನು ಪಡೆಯುವಾಗ ರೆಡ್‌ಹ್ಯಾಂಡಾಗಿ ಸಿಕ್ಕಿರುವುದು ಮತ್ತು 2ನೇ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಪ್ರದೀಪ್ ಹೆಚ್. ಆರ್. ಬಿನ್ ರಮೇಶ್ ಸಿ. ಎಲಕ್ಟ್ರೀಷಿಯನ್, ಹುಳಿಮಾವು, ಬನ್ನೇರುಘಟ್ಟರಸ್ತೆ, ಬೆಂಗಳೂರು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದೂರುದಾರರ ಮಾವನವರಾದ ಶ್ರೀ. ಮಾದಪ್ಪ ಬಿನ್ ನಂಜಪ್ಪ ಇವರ ಮಾಲೀಕತ್ವದಲ್ಲಿರುವ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸಣ್ಣನಾಯಕನಪುರ ಗ್ರಾಮದ ಸರ್ವೆ ನಂ.46 ರಲ್ಲಿ 5 ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಲು ದೂರುದಾರರ ಮಾವನವರು ಜಿಲ್ಲಾಧಿಕಾರಿ, ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಿದ್ದು, ಸದರಿಯವರಿಗೆ ವಯಸ್ಸಾಗಿದ್ದರಿಂದ ಸದರಿ ಕೆಲಸವನ್ನು ಮಾಡಿಸಲು ದೂರುದಾರರಿಗೆ ತಿಳಿಸಿದ್ದು, ಬೆಂಗಳೂರು ಜಿಲ್ಲಾಧಿಕಾರಿಗಳು ಸದರಿ ಭೂಮಿಯು ಯಾವ ವಲಯಕ್ಕೆ ಬರುತ್ತದೆ ಮತ್ತು ಸದರಿ ಭೂಮಿಯು ಭೂ ಸ್ವಾಧೀನಕ್ಕೆ ಒಳಪಟ್ಟಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಮತ್ತು ಭೂಸ್ವಾಧೀನಕ್ಕೆ ಒಳಪಡದಿದ್ದರೆ ಎನ್.ಓ.ಸಿ. ನೀಡಲು ಮಾಹಿತಿ ಕೇಳಿ, ದಿ: 10/05/2017ರಂದು ವಿಶೇಷ ಜಿಲ್ಲಾಧಿಕಾರಿ, ಕೆ.ಹೆಚ್.ಬಿ. ಬೆಂಗಳೂರು ಇವರಿಗೆ ಪತ್ರ ಬರೆದಿದ್ದು, ಸದರಿ ಪತ್ರವನ್ನು ದೂರುದಾರರ ತಾವೇ ಸ್ವತ: ವಿಶೇಷ

ಜಿಲ್ಲಾಧಿಕಾರಿ, ಕೆ.ಹೆಚ್.ಬಿ. ಬೆಂಗಳೂರು ಇವರಿಗೆ ತಲುಪಿಸಿರುತ್ತಾರೆ. ದಿ: 12/06/2017 ರಂದು ದೂರುದಾರರು ವಿಶೇಷ ಜಿಲ್ಲಾಧಿಕಾರಿ, ಕೆ.ಹೆಚ್.ಬಿ. ಬೆಂಗಳೂರು ಇವರ ಕಚೇರಿಗೆ ಹೋಗಿ, ಕೇಸ್ ವರ್ಕರ್ ಆದ 2ನೇ ಎದುರುದಾರರನ್ನು ಭೇಟಿಮಾಡಲಾಗಿ, 2ನೇ ಎದುರುದಾರರು 1ನೇ ಎದುರುದಾರರ ಕ್ಯಾಬಿನ್‌ಗೆ ಹೋಗಿ ಮಾತನಾಡಿ ನಂತರ, ದೂರುದಾರರನ್ನು ಕರೆದು, ಭೂ ಪರಿವರ್ತನೆಗೆ ಸಂಬಂಧಿಸಿದಂತೆ ಎನ್.ಒ.ಸಿ. ನೀಡಲು 25,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಅದನ್ನು ದೂರುದಾರರು ತಮ್ಮ ಮೊಬೈಲ್ ನಲ್ಲಿ ಆಡಿಯೋ ಮತ್ತು ವೀಡಿಯೋವನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 14/06/2017 ರಂದು ಬೆಂಗಳೂರು ನಗರ ಜಿಲ್ಲೆ ಎಸಿಬಿ ಪೋಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.23/2017 ರಲ್ಲಿ ಕಲಂ 7 ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಗೋಪಾಲಕೃಷ್ಣ (ನೆರಳುಸಾಕ್ಷಿ) 2) ಗಿರೀಶ ಇವರುಗಳನ್ನು ಬರಮಾಡಿಕೊಂಡು, ಸದರಿಯವರುಗಳ ಸಮಕ್ಷಮ ದೂರುದಾರರು ಹಾಜರುಪಡಿಸಿದ ಸಿ.ಡಿ.ಯಲ್ಲಿಯ ಸಂಭಾಷಣೆಯನ್ನು ಲಿಪಿಕರಿಸಿ, ಅದನ್ನು ಪಂಚರಿಗೆ ಕೇಳಿಸಲಾಗಿ ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ದೂರುದಾರರು ಹಾಜರುಪಡಿಸಿದ ಸಿ.ಡಿ.ಯನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ ರೂ. 25,000/- (500X2, 2000X12) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಬೆರಳಚ್ಚು ಮಾಡಿಸಿದ್ದು, ಪಂಚರು ಅವುಗಳನ್ನು ತಾಳೆಮಾಡಿ ನೋಡಿರುತ್ತಾರೆ., ಪೋಲೀಸ್ ಸಿಬ್ಬಂದಿ ನೋಟುಗಳ ಎರಡೂ ಬದಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಗಿರೀಶ್ ಇವರ ಮೂಲಕ ದೂರುದಾರರ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಗಿರೀಶ್‌ರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಗೋಪಾಲ್‌ಕೃಷ್ಣ ಇವರಿಗೆ

ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರನ್ನು ಭೇಟಿಯಾದಾಗ ಕೆಲಸದ ಬಗ್ಗೆ ವಿಚಾರಿಸಬೇಕು ಮತ್ತು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕೈಯಿಂದ ತಲೆ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಮತ್ತು ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 14-06-2017 ರಂದು ಸಮಯ ಮಧ್ಯಾಹ್ನ 12.45 ರಿಂದ 2.45 ಘಂಟೆಯವರೆಗೆ ಬೆಂಗಳೂರು ನಗರ ಜಿಲ್ಲೆ ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಮಧ್ಯಾಹ್ನ 3.05 ಗಂಟೆಗೆ ಬೆಂಗಳೂರಿನ ಕಾವೇರಿ ಭವನಕ್ಕೆ ತಲುಪಿ, ಪಾರ್ಕಿಂಗ್‌ನಲ್ಲಿ ವಾಹನ ನಿಲ್ಲಿಸಿ, ಎದುರುದಾರರು ಕೆಲಸಮಾಡುವ ನಾಲ್ಕನೇ ಮಹಡಿಗೆ ಬಂದು ದೂರುದಾರರನ್ನು ಹಾಗೂ ನೆರಳು ಸಾಕ್ಷಿಯನ್ನು ಕಚೇರಿಯ ಒಳಗೆ ಕಳುಹಿಸಿ ದಾಳಿತಂಡದವರು ಪ್ಯಾಸೇಜ್‌ನಲ್ಲಿ ಗೌಪ್ಯವಾಗಿ ಅಲ್ಲಲ್ಲಿ ಸ್ವಲ್ಪ ದೂರದಲ್ಲಿ ಸಂಶಯಬರದಂತೆ ನಿಂತಿರುತ್ತಾರೆ. ದೂರುದಾರರು ಕಚೇರಿ ಒಳಗೆ ಹೋದಾಗ, 2ನೇ ಎದುರುದಾರರು ಹಾಜರಿದ್ದು, 1ನೇ ಎದುರುದಾರರ ಕಾಫಿ ಕುಡಿಯಲು ಹೋಗಿದ್ದು, ಹಣವನ್ನು ತನ್ನ ಕೈಯಲ್ಲಿ ನೀಡುವಂತೆ 2ನೇ ಎದುರುದಾರರು ಕೇಳಿದ್ದು, ಅದಕ್ಕೆ ದೂರುದಾರರು 1ನೇ ಎದುರುದಾರರ ಹತ್ತಿರ ಮಾತನಾಡಿ, ನಂತರ ಹಣ ಕೊಡುವುದಾಗಿ ಹೇಳಿದ್ದರಿಂದ, 2ನೇ ಎದುರುದಾರರು 1ನೇ ಎದುರುದಾರರಿಗೆ ಫೋನ್ ಮಾಡಲಾಗಿ, 1ನೇ ಎದುರುದಾರರು 2ನೇ ಎದುರುದಾರರ ಹತ್ತಿರ ಹಣವನ್ನು ಕೊಡಲು ಹೇಳಿರುತ್ತಾರೆ. ದೂರುದಾರರು 2ನೇ ಎದುರುದಾರರೊಂದಿಗೆ ನಡೆದಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ. ಅಷ್ಟರಲ್ಲಿ 1ನೇ ಎದುರುದಾರರು ಕಚೇರಿಗೆ ಬಂದಿದ್ದು, 1ನೇ ಎದುರುದಾರರು ದೂರುದಾರರನ್ನು ಲಿಫ್ಟ್ ಹತ್ತಿರವಿರುವ ಸಂಧಿಗೆ ಕರೆದುಕೊಂಡು ಹೋಗಿ ಅಲ್ಲಿ ಹಣವನ್ನು ಪಡೆದು, ಎರಡೂ ಕೈಗಳಿಂದ ಎಣಿಸಿ ಪ್ಯಾಂಟ್ ಹಿಂಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಹಣ ಪಡೆದುಕೊಂಡ ನಂತರ, ಸುಮಾರು 3.55 ಘಂಟೆಗೆ ದೂರುದಾರರ ಸೂಚನೆಯ ಮೇರೆಗೆ ತಕ್ಷಣ ದಾಳಿತಂಡದವರು ಎದುರುದಾರರ ಕಚೇರಿಗೆ ಬಂದಿದ್ದು, ದೂರುದಾರರನ್ನು ವಿಚಾರಿಸಲಾಗಿ, ದೂರುದಾರರು 1 ಮತ್ತು

2ನೇ ಎದುರುದಾರರನ್ನು ತೋರಿಸಿ, ಅದರಲ್ಲಿ 1ನೇ ಎದುರುದಾರರಾದ ಇವರೇ ನನ್ನಿಂದ ಲಂಚ ಪಡೆದುಕೊಂಡು ಸದರಿ ಹಣವನ್ನು ಎರಡೂ ಕೈನಿಂದ ಎಣಿಸಿ, ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಮತ್ತು 5 ನಿಮಿಷದಲ್ಲಿ ಎನ್.ಒ.ಸಿ. ಯನ್ನು ಸಹಿ ಮಾಡಿಸಿ ನೀಡುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ದೂರಿನಲ್ಲಿ 1ನೇ ಎದುರುದಾರರ ಹೆಸರನ್ನು ಹನುಮೇಗೌಡ ಎಂದು ಬರೆದ ಬಗ್ಗೆ ಕೇಳಲಾಗಿ ತಾನು ತಪ್ಪಾಗಿ ಬರೆದಿರುವುದಾಗಿ ಹೇಳಿರುತ್ತಾರೆ. ತನಿಖಾಧಿಕಾರಿಯವರು ತಮ್ಮ ಪರಿಚಯ ಮಾಡಿಕೊಂಡು 1 ಮತ್ತು 2ನೇ ಎದುರುದಾರರ ಮೇಲೆ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ ತನಿಖೆಗೆ ಸಹಕರಿಸುವಂತೆ ಸೂಚಿಸಿರುತ್ತಾರೆ. 1ನೇ ಎದುರುದಾರರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ 1ನೇ ಎದುರುದಾರರನ್ನು ವಿಚಾರಿಸಲಾಗಿ, ಲಂಚದ ಹಣವನ್ನು ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ಅದನ್ನು ಪಂಚ-1 ರವರು ತೆಗೆದು ಸದರಿ ನೋಟುಗಳನ್ನು ಈಗಾಗಲೇ ದಾಖಲಿಸಿಕೊಂಡ ನಂಬರಿನೊಂದಿಗೆ ತಾಳೆಮಾಡಿ ನೋಡಲಾಗಿ, ನೋಟುಗಳ ನಂಬರುಗಳು ತಾಳೆಯಾದ ಮೇರೆಗೆ ತನಿಖಾಧಿಕಾರಿಗಳು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. 1ನೇ ಎದುರುದಾರರ ಪ್ಯಾಂಟನ್ನು ತಪಾಸು ಮಾಡಲಾಗಿ ಸದರಿಯವರ ಹತ್ತಿರ 12,000/- ರೂ. ದೊರೆತಿದ್ದು, ಅದಕ್ಕೆ ಸಮಂಜಸ ಉತ್ತರ ನೀಡಿಲ್ಲವಾದ್ದರಿಂದ, ಸದರಿ ಹಣವನ್ನು ಕೂಡ ಅಮಾನತ್ತುಪಡಿಸಿಕೊಂಡಿರುತ್ತಾರೆ. ಹಣ ಇಟ್ಟುಕೊಂಡ ಪ್ಯಾಂಟನ್ನು ಕೂಡ ಅಮಾನತ್ತುಪಡಿಸಿಕೊಂಡಿರುತ್ತಾರೆ. ದೂರುದಾರರು 2ನೇ ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿದ್ದು, 1ನೇ ಎದುರುದಾರರ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿಲ್ಲವೆಂದು ನುಡಿದಿರುತ್ತಾರೆ. 2ನೇ ಎದುರುದಾರರ ಸಂಭಾಷಣೆಯನ್ನು ಲಿಪಿಕರಿಸಿ, ಪಂಚರಿಗೆ ಕೇಳಿಸಿ ಅದನ್ನು ಡಿ.ವಿ.ಡಿಗೆ ವರ್ಗಾಯಿಸಲಾಗಿರುತ್ತದೆ. 1 ಮತ್ತು 2ನೇ ಎದುರುದಾರರ ಸಂಭಾಷಣೆಯ ಲಿಪಿಕರಣವನ್ನು ಆರು ಬಾರಿ ಓದಿಸುವ ಮೂಲಕ ಸದರಿಯವರ ಮಾದರಿ ಧ್ವನಿಯನ್ನು ತನಿಖಾಧಿಕಾರಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಅದೇ ಪ್ರಕಾರ ದೂರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಕಡತದ ಬಗ್ಗೆ ವಿಚಾರಿಸಲಾಗಿ, 2ನೇ ಎದುರುದಾರರು ಹಾಜರುಪಡಿಸಿದ್ದು, ಅದನ್ನು ಜೆರಾಕ್ಸ್ ಮಾಡಿಸಿ ಭೂಸ್ವಾಧೀನಾಧಿಕಾರಿ ದಯಾನಂದ್ ಭಂಡಾರಿ ಇವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ಕಚೇರಿಯ ಇನ್‌ವಾರ್ಡ್ ರಿಜಿಸ್ಟರ್ ಹಾಗೂ ಹಾಜರಾತಿಗೆ

ಸಂಬಂಧಿಸಿದಂತೆ ಬಯೋಮೆಟ್ರಿಕ್ ದಾಖಲೆಗಳನ್ನು ಭೂಸ್ವಾಧೀನಾಧಿಕಾರಿಯವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. 1ನೇ ಎದುರುದಾರರ ರಕ್ಷಣಾ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿಯವರು ರಕ್ಷಣಾ ಹೇಳಿಕೆಯಲ್ಲಿ ಮೀಟಿಂಗ್‌ನಿಂದ ಬರುವಾಗ ಲಿಫ್ಟಿನ ಹತ್ತಿರ ಅಪರಿಚಿತ ವ್ಯಕ್ತಿ ಸಿಕ್ಕು ಶಿವಸ್ವಾಮಿಯವರು ನಿಮಗೆ ಹಣಕೊಡಲು ಹೇಳಿದ್ದಾರೆ. ಎಂದು ಬಲವಂತವಾಗಿ ಹಣಕೊಡಲು ಬಂದಿದ್ದು, ನಾನು ನಿರಾಕರಿಸಿದೆ, ತುಂಬಾ ಒತ್ತಾಯ ಮಾಡಿದ್ದರಿಂದ ಪ್ಯಾಂಟ್‌ಜೇಬಿನಲ್ಲಿ ಇಟ್ಟುಕೊಂಡೆ ಎಂದು ಬರೆದುಕೊಟ್ಟಿರುತ್ತಾರೆ. 2ನೇ ಎದುರುದಾರರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಕಡತ ದಿ: 10/05/2017ರಂದು ಬಂದಿದ್ದು, ದಿ: 29/05/2017 ರಂದು ಅಟೆಂಡ್ ಮಾಡಿರುತ್ತೇನೆ. ದಾಖಲೆಗಳ ಬಗ್ಗೆ ಅನುಮಾನವಿದ್ದುದರಿಂದ, ಕಡತವನ್ನು ಮುಂದುವರಿಸಿಲ್ಲ. ಈ ಪ್ರಕರಣದ ಅರ್ಜಿದಾರರ ಮಗನೆಂದು ಹೇಳಿ, ಯಾರೋ ಬಂದು ಹಣದ ಆಮಿಷ ಒಡ್ಡಿದ್ದು, ತಾನು ಮಾತನಾಡಿಲ್ಲವಾದ್ದರಿಂದ ಸಾಹೇಬರಿಗೆ ಆತ್ಮೀಯರಾಗಿರುವ 1ನೇ ಆರೋಪಿಯನ್ನು ಪರಿಚಯ ಮಾಡಿಕೊಳ್ಳುತ್ತೇನೆಂದು ಹೇಳಿ ಹೋದರು. ತನಗೂ ಲಂಚದ ಹಣಕ್ಕೂ ಯಾವುದೇ ಸಂಬಂಧವಿಲ್ಲ. ತಾನು ಲಂಚದ ಹಣಕ್ಕೆ ಒತ್ತಾಯ ಮಾಡಿಲ್ಲ ಎಂದು ಬರೆದುಕೊಟ್ಟರುತ್ತಾರೆ. ರಕ್ಷಣಾ ಹೇಳಿಕೆಗಳ ಬಗ್ಗೆ ದೂರುದಾರರು ಹಾಗೂ ನೆರಳುಸಾಕ್ಷಿಯನ್ನು ಕೇಳಲಾಗಿ, ಸದರಿಯವರ ರಕ್ಷಣಾ ಹೇಳಿಕೆಯು ಸುಳ್ಳಿನಿಂದಕೂಡಿರುತ್ತದೆ ಎಂದು ನುಡಿದಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 14/06/2017 ರಂದು ಸಾಯಂಕಾಲ 4.30 ರಿಂದ ರಾತ್ರಿ 9.15 ಗಂಟೆಯವರೆಗೆ ನಾಲ್ಕನೇ ಮಹಡಿಯಲ್ಲಿರುವ ಎದುರುದಾರರ ಕಚೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡೂ ಕೈಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಲಂಚಕ್ಕಾಗಿ ಬೇಡಿಕೆ ಇಟ್ಟ ಸಂಭಾಷಣೆಯಲ್ಲಿಯ ಧ್ವನಿಯು 1 ಮತ್ತು 2ನೇ ಎದುರುದಾರರ ಮಾದರಿ ಧ್ವನಿಯೊಂದಿಗೆ ತಾಳೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 1 ಮತ್ತು 2ನೇ ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರುಗಳನ್ನು ಸೇವೆಯಿಂದ ವಜಾ

ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿದ್ದು, 1ನೇ ಎದುರುದಾರರು ತಮ್ಮ ಸಮಜಾಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಿದ ಆಪಾದನೆಗಳು ಸುಳ್ಳಿನಿಂದ ಕೂಡಿದ್ದು, ತಾನು ಯಾವುದೇ ದುರ್ವರ್ತನೆ ತೋರಿರುವುದಿಲ್ಲ. ತನಗೆ ಎನ್.ಓ.ಸಿ ನೀಡಲು ಯಾವುದೇ ಅಧಿಕಾರವಿರುವುದಿಲ್ಲ. ದೂರುದಾರರು ರೂಡಿಗತ ಅಪರಾಧಿಯಾಗಿದ್ದು, ಸರ್ಕಾರಿ ನೌಕರರಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ತನ್ನ ಅಕ್ರಮ ಲಾಭಕ್ಕಾಗಿ ಮಾದಪ್ಪನಿಂದ ಯಾವುದೇ ಅಧಿಕಾರ ಪತ್ರ ಇಲ್ಲದಿದ್ದರೂ ಸಹ ಸುಳ್ಳು ದೂರು ಸಲ್ಲಿಸಿದ್ದಾರೆ. ಎ.ಸಿ.ಬಿ ಪೋಲೀಸ್‌ರು ಪ್ರಕರಣವನ್ನು ಸೃಷ್ಟಿ ಮಾಡಿರುತ್ತಾರೆ. ತಾನು ಯಾವುದೇ ಲಂಚವನ್ನು ಪಡೆದುಕೊಂಡಿರುವುದಿಲ್ಲ. ದೂರುದಾರರು ಒತ್ತಾಯ ಪೂರ್ವಕವಾಗಿ ಹಣವನ್ನು ತಾನು ಮೆಟ್ಟಿಲಿನಿಂದ ಇಳಿಯುವಾಗ ನನ್ನ ಪ್ಯಾಂಟ್ ಜೇಬಿನಲ್ಲಿ ತುರುಕಿರುತ್ತಾರೆ. ತನಿಖಾಧಿಕಾರಿ ಸೂಚನೆ ಮೇರೆಗೆ ತಾನು ಹಣವನ್ನು ಪ್ಯಾಂಟ್ ಜೇಬಿನಿಂದ ತೆಗೆದು ಸಾಕ್ಷಿದಾರರ ಕೈಯಲ್ಲಿ ಕೊಟ್ಟ ನಂತರ ನನ್ನ ಕೈ ತೊಳೆದಿದ್ದರಿಂದ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಟ್ರ್ಯಾಪ್‌ಗಿಂತ ಪೂರ್ವದಲ್ಲಿ ದೂರುದಾರರು ನನ್ನನ್ನು ಭೇಟಿಯಾಗಿರುವುದಿಲ್ಲ. ಸಂಭಾಷಣೆಯನ್ನು ಸೃಷ್ಟಿ ಮಾಡಿರುತ್ತಾರೆ. 20 ವರ್ಷಗಳಿಂದ ತಾನು ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದರಿಂದ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತಾನು ಎಸ್.ಡಿ.ಎ ಆಗಿ ಕೆಲಸ ಮಾಡುತ್ತಿದ್ದು, ಮೇಲಾಧಿಕಾರಿಗಳ ನಿರ್ದೇಶನ ಹಾಗೂ ಸಾರ್ವಜನಿಕರ ಕಾಳಜಿ ಇವರೆಡನ್ನು ಗಮನದಲ್ಲಿಟ್ಟುಕೊಂಡು, ಕೆಲಸ ಮಾಡಬೇಕಾಗಿದ್ದು, ತನ್ನ ಕೆಲಸ ಕತ್ತಿ ಮೇಲೆ ನಡೆದಂತೆ ಆಗಿರುತ್ತದೆ. ಸರ್ಕಾರಿ ಕಚೇರಿಗೆ ಅನೇಕ ಜನ ಸಾರ್ವಜನಿಕರು ಕೆಲಸಕ್ಕೆ ಬರುತ್ತಾರೆ. ತಾನು 23 ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಯಾರಿಗೂ ತೊಂದರೆ ಕೊಟ್ಟಿರುವುದಿಲ್ಲ. ತನ್ನ ಮೇಲೆ ಯಾವುದೇ ಸಾರ್ವಜನಿಕರು ದೂರು ಕೊಟ್ಟಿರುವುದಿಲ್ಲ. ಯಾವುದೇ ಸಾರ್ವಜನಿಕರಿಂದ ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ಎನ್.ಓ.ಸಿ ಕೋರಿ ಅರ್ಜಿಯು ದಿ: 26/05/2017 ರಂದು ಬಂದಿದ್ದು, ದಿ: 29/05/2017 ರಂದು ಎನ್.ಓ.ಸಿ ತಯಾರಿಸಿರುತ್ತೇನೆ. ಗೂಗಲ್‌ನಲ್ಲಿ ನೋಡಲಾಗಿ, ಸೊಣ್ಣನಾಯಕನಪುರ ಗ್ರಾಮದಲ್ಲಿ 46ನೇ ಸರ್ವೇ ನಂಬರ್ ಇರುವುದಿಲ್ಲ. ಆರ್.ಟಿ.ಸಿ ಮಾತ್ರ ಇರುತ್ತದೆ. ಸದರಿ ಗ್ರಾಮದ ಗೋಮಾಳದ ಜಮೀನಿನ ಸರ್ವೇ ನಂ: 10 ರಲ್ಲಿ ಸುಮಾರು 293 ಎಕರೆ ಜಮೀನು ಇರುತ್ತದೆ. ಅದರಲ್ಲಿ ಅನೇಕ ಜನ ಜಂಟಿ ಖಾತೆದಾರರು ಇರುತ್ತಾರೆ. ಸರ್ವೇ ನಂ: 46ರ ವಿಸ್ತೀರ್ಣ ದುರಸ್ಥಾಗಿ ಪೋಡಿ ಆಗಿರುವುದಿಲ್ಲ. ಆರ್.ಟಿ.ಸಿ ಬಗ್ಗೆ ಅನುಮಾನವಿದ್ದು, ಸಾಹೇಬರ

ಗಮನಕ್ಕೆ ತಂದಿರುತ್ತೇನೆ. ಸಾಹೇಬರು ಕಚೇರಿ ಒತ್ತಡದಲ್ಲಿ ಆಮೇಲೆ ನೋಡೋಣ ಎಂದು ತಿಳಿಸಿದರು. ಈ ಕಾರಣದಿಂದಾಗಿ ತಡವಾಗಿರುತ್ತದೆ. ಮೇಲ್ಕಂಡ ವಿಷಯವನ್ನು ದೂರುದಾರರಿಗೆ ತಿಳಿಸಲಾಗಿ, ತಾನು ಮಾದಪ್ಪನ ಮಗನೆಂದು ಸುಳ್ಳು ಹೇಳಿರುತ್ತಾರೆ. ಸಾಹೇಬರು ಏಕೆ ಸಹಿ ಮಾಡಿರುವುದಿಲ್ಲ ಎಂದು ದೂರುದಾರರು ಕೇಳಿದಾಗ, ನೀವೇ ಸಾಹೇಬರನ್ನು ಭೇಟಿಯಾಗಿ ಚರ್ಚಿಸಿ ಎಂದು ಹೇಳಿರುತ್ತೇನೆ. ಪ್ರಕರಣದಲ್ಲಿದ್ದ ದೋಷವನ್ನು ದೂರುದಾರರಿಗೆ ತಿಳಿಸಲಾಗಿ, ಅವರೇ ಹಣದ ಆಮಿಷವನ್ನು ಒಡ್ಡಿರುತ್ತಾರೆ. ಮೇಲೆ ಹೇಳಿದ ದೋಷದಿಂದಾಗಿ ತನಗೆ ಎನ್.ಓ.ಸಿ ಸಿಗದೇ ತೊಂದರೆಯಾಗಬಹುದೆಂದು ದೂರುದಾರರು ಸುಳ್ಳು ದೂರು ದಾಖಲಿಸಿರುತ್ತಾರೆ. ದೂರುದಾರರು ಜಮೀನಿನ ಮಾಲಕರಲ್ಲ, ಮಾದಪ್ಪನು ದೂರುದಾರರ ಮಾವನಲ್ಲ. ಜಮೀನಿನ ಮಾಲೀಕರು ಮಾದಪ್ಪನೆಂದು ಸಹಿ ಮಾಡಿರುತ್ತಾರೆ. ಮಾದಪ್ಪನಿಂದ ಜಿ.ಪಿ.ಎ. ಪಡೆದುಕೊಂಡಿರುವುದಿಲ್ಲ. ಒಬ್ಬಬ್ಬರ ಹತ್ತಿರ ಒಂದು ತರವಾಗಿ ಸುಳ್ಳು ಹೇಳಿರುತ್ತಾರೆ. ದೂರುದಾರರು ಒಂದು ರೀತಿ ಬ್ರೋಕರ್ ಕೆಲಸ ಮಾಡುತ್ತಾರೆ. ಕೆಲಸ ಮಾಡಿಸಿಕೊಳ್ಳಲು ಕಚೇರಿಗೆ ಬರುವವರು ವಿಡಿಯೋ ಮಾಡಿಕೊಳ್ಳುವುದು ಉಂಟೆ? ಅಂಕಿ ಸಂಖ್ಯೆಗಾಗಿ ಪೊಲೀಸ್‌ರು ದೂರು ದಾಖಲಿಸಿದ್ದಾರೆ. ಈ ದೂರುದಾರರು ಅನೇಕ ಸರ್ಕಾರಿ ಅಧಿಕಾರಿಗಳ ವಿರುದ್ಧ ಕೇಸ್‌ನ್ನು ಹಾಕಿರುತ್ತಾರೆ. ದೂರುದಾರರು ತನ್ನೊಂದಿಗೆ 10/15 ನಿಮಿಷಗಳ ಕಾಲ ಮಾತನಾಡಿದ್ದು, ವಿಡಿಯೋವನ್ನು ಎಡಿಟ್ ಮಾಡಿರುತ್ತಾರೆ. ತಮಗೆ ತೊಂದರೆಯಾಗುವ ಭಾಗವನ್ನು ತೆಗೆದು ಹಾಕಿರುತ್ತಾರೆ. ದೂರುದಾರರು ದಿ: 12/06/2017 ರಂದು ಮಧ್ಯಾಹ್ನ 3:00 / 3:30 ಗಂಟೆ ಸಮಯದಲ್ಲಿ ನಮ್ಮ ಕಚೇರಿಗೆ ಬಂದಿರುವುದಿಲ್ಲ. ಅಂದು ತಾನು ಹೊರಗಡೆ ಹೋಗಿದ್ದು, 4:30 ಗಂಟೆಗೆ ಕಚೇರಿಗೆ ಬಂದಿರುತ್ತೇನೆ. ದೂರುದಾರರು ಟ್ರ್ಯಾಪ್ ಸಮಯದಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯಲ್ಲಿ ತಾನು ಹಣವನ್ನು ಕೇಳಿರುವ ಬಗ್ಗೆ ದಾಖಲೆ ಇರುವುದಿಲ್ಲ. ಈ ಸರ್ವೇ ನಂಬರ್ ಬಗ್ಗೆ ಸಾಹೇಬರಿಗೆ ಮತ್ತೊಮ್ಮೆ ತಿಳಿಸುವಷ್ಟರಲ್ಲಿ ಬೇರೇನೋ ನಡೆದು ಹೋಯಿತು. ಸಾಹೇಬರ್‌ಗೆ ವಿಷಯ ತಿಳಿಸಲು ಅವಕಾಶವೇ ದೊರೆಯಲಿಲ್ಲ. ಸಹೋದ್ಯೋಗಿಗಳ ಕಿತಾಪತಿಯಿಂದ ಯಾರಿಗೆ ತೊಂದರೆಯಾಗಬೇಕಾಗಿತ್ತೋ, ಅವರಿಗೆ ಆಗಲಿಲ್ಲ, ಕೋತಿ ಮೊಸರನ್ನು ತಿಂದು, ಮೇಕೆ ಬಾಯಿಗೆ ಒರೆಸಿ, ಮೇಕೆಯನ್ನು ಪ್ರಕರಣದಲ್ಲಿ ಸಿಲುಕಿಸಿದಂತಾಗಿದೆ. ಇದನ್ನು ಯಾರಿಗೆ ಹೇಳಬೇಕೇನ್ನುವುದು ನನಗೆ ತಿಳಿಯದಾಗಿದೆ. ಸರ್ಕಾರಿ ಕಚೇರಿಯಲ್ಲಿ ಸಣ್ಣ ಪುಟ್ಟ ತಾಂತ್ರಿಕ ತೊಂದರೆಗಳು ಇರುತ್ತವೆ. ಇವುಗಳ ನಡುವೆ ನಿಷ್ಠೆ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುವುದು ಕಷ್ಟವಾಗಿದೆ. ನನ್ನ ಮೇಲೆ ಮಾಡಿದ ಆಪಾದನೆಗಳು ಸುಳ್ಳು ಇರುತ್ತವೆ. ಎ.ಸಿ.ಬಿ ಪೊಲೀಸ್‌ರು ದಾಖಲಿಸಿಕೊಂಡ ಕೆಲವೊಂದು ಪ್ರಕರಣಗಳಲ್ಲಿಯ ಆರೋಪಿತರು ನಿರ್ದೋಷಿಗಳೆಂದು ಸಾಬೀತಾಗಿರುತ್ತವೆ. ಈ ಎಲ್ಲಾ ಮೇಲ್ಕಂಡ ಕಾರಣಗಳಿಂದ ತನ್ನನ್ನು ಪ್ರಕರಣದಿಂದ ಮುಕ್ತಿಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳಿರುವುದಿಲ್ಲ.

5. ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ 1 ಮತ್ತು 2ನೇ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

4/2/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**